3) *ಇತರ ಜಿಲ್ಲೆಗಳ ಖಾಸಗೀ ಅಕ್ಕಿ ಗಿರಣಿಗಳಲ್ಲಿ ಅಕ್ಕಿ ತಯಾರಿಸಿ ದಕ್ಷಿಣ ಕನ್ನಡ ಜಿಲ್ಲೆಗೆ ಪೂರೈಸುವ ಬದಲು ಜಿಲ್ಲೆಯ ಸಹಕಾರಿ ಅಕ್ಕಿ ಗಿರಣಿಗಳಿಗೆ ಹೊರ ಜಿಲ್ಲೆಗಳಿಂದ ಭತ್ತ ಒದಗಿಸಿ ಸ್ಥಳೀಯವಾಗಿ ಉತ್ತಮ ಅಕ್ಕಿ ತಯಾರಿಸಿ, ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ದಕ್ಷಿಣ ಕನ್ನಡ ಜಿಲ್ಲೆಗೆ ಸಾರ್ವಜನಿಕ ವಿತರಣೆಗೆ ಅಕ್ಕಿಯನ್ನು ಒದಗಿಸುವುದಿಲ್ಲ. ಬದಲಾಗಿ ಈ ಜಿಲ್ಲೆಗೆ ಭಾರತ ಆಹಾರ ನಿಗಮದಿಂದ ಸಾರ್ವಜನಿಕ ವಿತರಣೆಗಾಗಿ 14,973 ಎಂ.ಟಿ. ಅಕ್ಕಿಯನ್ನು ವಾರ್ಷಿಕವಾಗಿ ಸರಬರಾಜು ಮಾಡಲಾಗುತ್ತಿದೆ.

ಆ) ಇಲ್ಲ.

ಇ) ಕರ್ನಾಟಕ ಆಹಾರ ನೀತಿಯ ಪ್ರಕಾರ ಭತ್ತವು ಅಂತರ ಜಿಲ್ಲೆಯಲ್ಲಿ ಸಾಗಾಣಿಕೆಗೆ ಮುಕ್ತವಾಗಿದೆ. ರಾಜ್ಯ ಸರ್ಕಾರವು ಲೆವಿ ಆದೇಶದಡಿಯಲ್ಲಿ ಅಕ್ಕಿಯನ್ನು ಮಾತ್ರ ಲೆವಿಯನ್ನಾಗಿ ಸಂಗ್ರಹಿಸುತ್ತಿದೆಯೇ ಹೊರತು ಭತ್ತವನ್ನು ಸಂಗ್ರಹಿಸುವುದಿಲ್ಲ. ಹಾಗೂ ಕೇಂದ್ರದಿಂದ ಅಕ್ಕಿಯನ್ನು ಹಂಚಿಕೆ ಪಡೆದು ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿದೆ. ಆದ್ದರಿಂದ ಭತ್ತವನ್ನು ಬೇರೆ ಜಿಲ್ಲೆಗಳಿಂದ ಪಡೆದು ದಕ್ಷಿಣ ಕನ್ನಡ ಜಿಲ್ಲೆಯ ಗಿರಣಿಗಳಲ್ಲಿ ಮಿಲ್ ಮಾಡಿಸಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ನೆಲಮಂಗಲದಲ್ಲಿ ದೊಡ್ಡ ಬಸ್ ನಿಲ್ದಾಣ ನಿರ್ಮಾಣ

701 - ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ನೆಲಮಂಗಲವು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿದ್ದು, ಅಲ್ಲಿನ ಬಸ್ ನಿಲ್ದಾಣ ಅತಿ ಚಿಕ್ಕದಾಗಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸೂಕ್ತ ಜಾಗವನ್ನು ಸ್ವಾಧೀನಪಡಿಸಿಕೊಂಡು ದೊಡ್ಡ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು

ಆ) ಹೌದು

ಬೆಂಗಳೂರು ನಗರದಲ್ಲಿ ಕಳಪೆ ಅಕ್ಕಿ ಸರಬರಾಜು

177 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?